ದಿಃ **02-08-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್ ಎಸ್ ಎನ್ ರವರಿಂದ

ವಾದಿಯರು ಈ ದಾವೆಯನ್ನು ಅಂದಾಜು 15 ವರ್ಷಗಳ ಹಿಂದೆ ಹೂಡಿರುತ್ತಾರೆ. ನಿಖರವಾಗಿ ಯಾವ ವರ್ಷದಂದು ಈ ದಾವೆ ಸಲ್ಲಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ವಾದಿಯರು ದಾವಾ ಸ್ವತ್ತಿನ ಕಬ್ಜೆಯಲ್ಲಿ ಇದ್ದಾರೆ ಎನ್ನುವ ಕುರಿತು ನಾನು ದಾಖಲೆಗಳನ್ನು ನೋಡಿರುತ್ತೇನೆ. ಯಾವ ದಾಖಲೆಗಳನ್ನು ನೋಡಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೊಲದ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು 60-70 ವರ್ಷಗಳ ಹಿಂದಿನಿಂದಲೂ ಉತಾರೆಗಳನ್ನು ನೋಡಿರುತ್ತೇನೆ. 60-70 ವರ್ಷಗಳ ಹಿಂದೆ ದಾವಾ ಸ್ವತ್ತಿಗೆ ಬ್ಲಾಕ್ ನಂಬರ ಇತ್ತೋ ಸರ್ವೆ ನಂಬರ್ ಇತ್ತೋ ನನಗೆ ಹೇಳಲು ಆಗುವುದಿಲ್ಲ. ನಾನು ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತು ಯಾವ ವರ್ಷದಂದು ಮರು ಮಂಜೂರಾತಿ ಆಯಿತು ಎಂಬುದು ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯರು ವಾದಿಗೆ ಗೊತ್ತಾಗದ ಹಾಗೆ ಯಾವ ವರ್ಷದಂದು ದಾವಾ ಸ್ವತ್ತಿನ ಕುರಿತು ತಮ್ಮ ಹೆಸರು ಹಚ್ಚಿಕೊಂಡಿರುತ್ತಾರೆ ಎನ್ನುವುದು ನನಗೆ ಹೇಳಲು ಆಗುವುದಿಲ್ಲ.

ದಾವಾ ಸ್ವತ್ತು ಮೂಲತಃ ಪ್ರತಿವಾದಿ ನಂ.1 ರವರ ತಂದೆಯ ಹೆಸರಿನಲ್ಲಿದ್ದು ಅವರು ಮೃತರಾದ ನಂತರ ಪ್ರತಿವಾದಿ ನಂ.1 ರವರ ಹೆಸರಿನಲ್ಲಿ ವಾರಸಾ ಆಗಿರುತ್ತದೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾನೆ ಎಂದು ವಾದಿಯ ಮಾತು ಕೇಳಿಕೊಂಡು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರು ದಾವಾ ಸ್ವತ್ತಿನ ದಾಖಲಾತಿಗಳಲ್ಲಿ ನಮೂದಾದ ದಿನದಿಂದ ಹಿಡಿದು ಇಲ್ಲಿಯವರೆಗೂ ಪ್ರತಿವಾದಿಯೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಬಾಡಿಗೆ ಮುಖಾಂತರ ಗಳೆ ಹೊಡೆಯಲು ಹೋಗಿದ್ದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ತುಕ್ಕಾನಟ್ಟಿ ಗ್ರಾಮದಲ್ಲಿ ವಾಸವಾಗಿರುತ್ತಾನೆ ಎಂದು ನಾನು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.